**ಸಾಕ್ಷಿಯನ್ನು ಇಂದು ದಿ.17.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ADGP ರವರಿಂದ 1 ಮತ್ತು 3 ನೇ ಎದುರುದಾರರ ಪರವಾಗಿಃ**

**4.** ನಾನು ಸರಕಾರದಿಂದ Approved ತೋಟಗಾರಿಕೆ ಬೆಳೆಗಳ ಮೌಲ್ಯಮಾಪಕ ಇರುವುದಿಲ್ಲ. ಆದರೆ ನಾನು ತೋಟಗಾರಿಕೆ ಇಲಾಖೆಯಲ್ಲಿ 30 ವರ್ಷಗಳ ಕಾಲ ಸಹಾಯಕ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸಿದ ಅನುಭವದ ಮೇರೆಗೆ ನಿ.ಪಿ.11 ಮೌಲ್ಯಮಾಪನದ ಅಂದಾಜು ಪತ್ರಿಕೆಯನ್ನು ನೀಡಿರುತ್ತೇನೆ. ನಾನು ತೋಟಗಾರಿಕ ಸಹಾಯ ಅಧಿಕಾರಿ ಎಂದು 14 ವರ್ಷ ಸೇವೆ ಸಲ್ಲಿಸಿದ್ದು, ಅದಕ್ಕಿಂತ ಮೊದಲು ತೋಟಗಾರಿಕಾ ಸಹಾಯಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ಹಿರಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಮಾತ್ರ ತೋಟಗಾರಿಕಾ ಬೆಳೆಗಳ ಬಗ್ಗೆ ಮೌಲ್ಯಮಾಪನ ಮಾಡಿ ವರದಿ ಕೊಡಲು ಅರ್ಹರಿರುತ್ತಾರೆ, ನಾನು ಕೇವಲ ತೋಟಗಾರಿಕೆ ಸಹಾಯಕ ಅಧಿಕಾರಿ ಆಗಿ ನಿವೃತ್ತನಾದ ಕಾರಣ ನನಗೆ ನಿ.ಪಿ.11 ರಂತೆ ಮೌಲ್ಯಮಾಪನ ವರದಿ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

5) ನನ್ನ ಅಂದಾಜು ಪತ್ರಿಕೆಯಲ್ಲಿ ಹಸಿ ದ್ರಾಕ್ಷಿ ಕೆ.ಜಿ.ಗೆ ರೂ.40/- ಆಗುತ್ತದೆ ಎಂದು ಬರೆದಿದ್ದು, ನಾನೇನೂ ಬೆಳೆಗಳ ಮಾರುಕಟ್ಟೆ ತಜ್ಞ ಅಲ್ಲ ಎಂದರೆ ಸರಿ. ಮಾರುಕಟ್ಟೆಯಲ್ಲಿರುವ ಅಂದಾಜು ಬೆಲೆಯನ್ನು ನಾನು ನಮೂದು ಮಾಡಿರುತ್ತೇನೆ.

6) ಸಾಮಾನ್ಯವಾಗಿ ಒಂದು ದ್ರಾಕ್ಷಿ ಗಿಡಕ್ಕೆ, ಅದರ ಸಸಿಯಿಂದ ಹಿಡಿದು ಬೆಳೆದು ಹಣ್ಣು ನೀಡುವವರೆಗೆ ಅಂದಾಜು 200 ರಿಂದ 300 ರೂಪಾಯಿ ಖರ್ಚು ಬರುತ್ತದೆ. ಸಾಮಾನ್ಯವಾಗಿ ಒಂದು ದ್ರಾಕ್ಷಿ ಗಿಡದ ಮಾರುಕಟ್ಟೆ ಬೆಲೆಯ 20 ರಿಂದ 30 ಪ್ರತಿಶತದಷ್ಟು ಅದರ ಖರ್ಚು ಆಗುತ್ತದೆ. ಒಂದು ದ್ರಾಕ್ಷಿ ಗಿಡಕ್ಕೆ ಸಾಮಾನ್ಯವಾಗಿ 70 ಪ್ರತಿಶತದಷ್ಟು ಖರ್ಚು ಆಗುತ್ತದೆ ಎಂದರೆ ಸರಿಯಲ್ಲ. ಎದುರುದಾರರು ಅರ್ಜಿದಾರರ ದ್ರಾಕ್ಷಿ ಗಿಡಗಳಿಗೆ ಪ್ರತಿ ಗಿಡಕ್ಕೆಂದು ರೂ.1731/- ರೂಪಾಯಿ ನೀಡಿರುತ್ತಾರೆ. ಎದುರುದಾರರು ತೋಟಗಾರಿಕೆ ಇಲಾಖೆಯಿಂದ ಅರ್ಜಿದಾರರ ದ್ರಾಕ್ಷಿ ಗಿಡಗಳಿಗೆ ಸಂಬಂಧಿಸಿದಂತೆ ಮಾಡಿಸಿದ ವರದಿಯನ್ನು ನಾನು ನೋಡಿರುತ್ತೇನೆ.

7) ಅರ್ಜಿದಾರರ ದ್ರಾಕ್ಷಿ ಗಿಡಗಳು ಯಾವ ತಳಿಯ ಗಿಡಗಳು ಎಂದು ನಾನು ನೀಡಿದ ನಿ.ಪಿ.11 ಅಂದಾಜು ಪತ್ರಿಕೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

8) ನಾನು ನಿ.ಪಿ.11 ರಂತೆ ಸುಳ್ಳು ಅಂದಾಜು ಪತ್ರಿಕೆ ತಯಾರಿಸಿ ಅದನ್ನೇ ನಾನು ಅರ್ಜಿದಾರರ ದ್ರಾಕ್ಷಿ ಗಿಡಗಳ ಮೌಲ್ಯಮಾಪನ ವರದಿ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ದ್ರಾಕ್ಷಿ ಗಿಡಗಳ ಮಾರುಕಟ್ಟೆ ಬೆಲೆಯನ್ನು 2021-22 ಹಾಗೂ 2022-23ರ ಸಾಲಿನ ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಅಂದಾಜಿಸಿರುತ್ತೇನೆ. ಈ ಬಗ್ಗೆ ನಿ.ಪಿ.13ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

9) ಪ್ರತಿ ಮೂರು ವರ್ಷಕ್ಕೊಮ್ಮೆ ತೋಟಗಾರಿಕೆ ಇಲಾಖೆಯವರ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ದರ ತಯಾರಿಸುತ್ತಾರೆ ಎಂದರೆ ಸರಿ. ತೋಟಗಾರಿಕೆ ಇಲಾಖೆಯವರ

ಮಾರ್ಗಸೂಚಿ ಪ್ರಕಾರ ಒಂದು ದ್ರಾಕ್ಷಿ ಗಿಡ ಸಾಮಾನ್ಯವಾಗಿ 14-15 ವರ್ಷದವರಗೆ ಇಳುವರಿ ಕೊಡುತ್ತದೆ ಎಂದು ಇರುತ್ತದೆ. ಆದರೆ ನನ್ನ ವರದಿಯಲ್ಲಿ 20-25 ವರ್ಷ ಇಳುವರಿ ಕೊಡುತ್ತದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

10) ನನ್ನ ಅಂದಾಜು ಪತ್ರಿಕೆಯಲ್ಲಿ ದ್ರಾಕ್ಷಿ ಗಿಡಗಳಿಗೆ, ಫಲ ಬಿಡುವ ಮೊದಲು ಹಾಗೂ ಫಲ ನೀಡಿದ ನಂತರ ಎಷ್ಟು ಖರ್ಚಾಗುತ್ತದೆ ಎಂದು ನಾನು ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರರ ದ್ರಾಕ್ಷಿ ಗಿಡಗಳು ಮೊದಲನೇ ವರ್ಗದ ದ್ರಾಕ್ಷಿ ಗಿಡಗಳಾಗಿರುತ್ತವೆ. ಆದರೆ ಆ ಬಗ್ಗೆ ನಿ.ಪಿ.11 ಅಂದಾಜು ಪತ್ರಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ.

11) ಸಾಮಾನ್ಯವಾಗಿ ಭೂ-ಸ್ವಾಧೀನವಾದ ಕ್ಷೇತ್ರದಲ್ಲಿ ತೋಟಗಾರಿಕೆ ಬೆಳೆಗಳ ಬಗ್ಗೆ ಮೌಲ್ಯಮಾಪನವನ್ನು ಹಿರಿಯ ತೋಟಗಾರಿಕೆ ಅಧಿಕಾರಿಗಳು ಮೌಲ್ಯಮಾಪನ ಮಾಡುತ್ತಾರೆ ಎಂದರೆ ಸರಿ. ಅವರು ತಮ್ಮ ವರದಿಯಲ್ಲಿ ದ್ರಾಕ್ಷಿ ಗಿಡಗಳ ತಳಿ, ಅವುಗಳ ವಯಸ್ಸು, ಸಂಖ್ಯೆ, ಇಳುವರಿ ಹಾಗೂ ಇತರೆ ಸಂಗತಿಗಳ ಬಗ್ಗೆ ವಿವವರವಾಗಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ಅಧಿಕಾರಿಗಳು ಸರಕಾರದ ಮಾರ್ಗಸೂಚಿಯ ಆಧಾರದ ಮೇಲೆಯೇ ಬೆಲೆ ನಿಗದಿಪಡಿಸಿರುತ್ತಾರೆ ಎಂದರೆ ಸರಿ.

12) ಅರ್ಜಿದಾರರ ದ್ರಾಕ್ಷಿ ಗಿಡಗಳಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯದಿಂದ ನೋಟೀಸ ಬಂದ ಮೇರೆಗೆ ವರದಿ ನೀಡಿರುತ್ತೇನೆ. ಸಾಕ್ಷಿಯು ಮುಂದುವರೆದು ಅರ್ಜಿದಾರರ ಮನವಿ ಮೇರೆಗೆ ಅವರ ದ್ರಾಕ್ಷಿ ಗಿಡಗಳ ಬಗ್ಗೆ ವರದಿ ನೀಡಿರುತ್ತೇನೆ.

13) ನಿ.ಪಿ.11 ಅಂದಾಜು ಪತ್ರಿಕೆಯಲ್ಲಿ ಅರ್ಜಿದಾರರ ದ್ರಾಕ್ಷಿ ಗಿಡಗಳು ಒಂದಕ್ಕೊಂದು ಎಷ್ಟು ಅಂತರದಲ್ಲಿ ಇದ್ದವು ಎಂಬುದರ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಅರ್ಜಿದಾರರ ಜಮೀನಿಗೆ ಹೋಗಿದ್ದಾಗ, ಅವರಿಂದ ನಾನು ದ್ರಾಕ್ಷಿ ಗಿಡಗಳನ್ನು ಬೆಳೆದ ಬಗ್ಗೆ ಹಾಗೂ ಅವುಗಳ ಇಳುವರಿ ಬಗ್ಗೆ ಹಾಗೂ ಅವುಗಳನ್ನು ಮಾರಾಟ ಮಾಡಿದ ಬಗ್ಗೆ ಯಾವುದೇ ರಶೀದಿಗಳನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಪಡೆದುಕೊಂಡು ಪರೀಶೀಲಿಸಿಲ್ಲ. ನಾನು ಅರ್ಜಿದಾರರ ಜಮೀನಿಗೆ ಹೋಗಿ ಪರಿಶೀಲಿನೆ ಮಾಡಿದ ಬಗ್ಗೆ ನಾನು ಯಾವುದೇ ಫೋಟೋಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

14) ನಿ.ಪಿ.11 ಅಂದಾಜು ಪತ್ರಿಕೆಯಲ್ಲಿ ನಾನು ಅರ್ಜಿದಾರರ ಜಮೀನಿಗೆ ಯಾವ ದಿನಾಂಕದಂದು ಭೇಟಿ ಕೊಟ್ಟಿರುತ್ತೇನೆ ಎಂಬುದರ ಬಗ್ಗೆ ದಿನಾಂಕ ನಮೂದು ಇಲ್ಲ ಎಂದರೆ ಸರಿ.

15) ಅರ್ಜಿದಾರರ ದ್ರಾಕ್ಷಿ ಗಿಡಗಳಿಗೆ ಸಂಬಂಧಿಸಿದಂತೆ ಪ್ರತಿ ಗಿಡಕ್ಕೆ ವರ್ಷಕ್ಕೆ ರೂ.2,14,400/- ಆದಾಯ ಬರುತ್ತದೆ ಎಂದು ನಾನು ನಿ.ಪಿ.11 ಪತ್ರಿಕೆಯಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

16) ನಾನು ಅರ್ಜಿದಾರರ ಜಮೀನಿಗೆ ಹೋಗದೇ, ಅರ್ಜಿದಾರರ ಹೇಳಿದ ಸಂಗತಿಗಳ ಮೇರೆಗೆ, ಅವರಿಗೆ ಹೆಚ್ಚಿನ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ನಿ.ಪಿ.11 ರಂತೆ ಸುಳ್ಳು ಅಂದಾಜು ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಈ ದಿನ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ.3 ರಲ್ಲಿ ನಮೂದಿಸಲಾದ 11 ತೆಂಗು

ಹಾಗೂ 5 ಪೇರು ಸಸಿಗಳಾಗಿದ್ದವು ಎನ್ನುವುದು ನಿಜ. ನಿ.ಪಿ.11 ರಂತೆ ವರದಿ ತಯಾರಿಸುವ ಪೂರ್ವದಲ್ಲಿ ಸ್ಥಳ ತನಿಖೆಯನ್ನು ಮಾಡಿರುವುದಿಲ್ಲ. ರೈತರು ನೀಡಿದ ಮಾಹಿತಿ ಆಧಾರದ ಮೇಲೆ ವರದಿಯನ್ನು ತಯಾರಿಸಿರುತ್ತೇನೆ. ಸುಮಾರು ಒಂದು ವರ್ಷದ ಹಿಂದೆ ಈ ಪ್ರಕರಣದ ಅರ್ಜಿದಾರರು ನನಗೆ ಭೇಟಿ ನೀಡಿ ಮಾಹಿತಿ ನೀಡಿದ ಮೇರೆಗೆ ಈ ವರದಿಯನ್ನು ತಯಾರಿಸಿರುತ್ತೇನೆ. ವರದಿಯನ್ನು ತಯಾರಿಸುವ ಪೂರ್ವದಲ್ಲಿ ರೈತರು ನೀಡಿದಂತಹ ಮಾಹಿತಿ ಹಾಗೂ 1ನೇ ಎದುರುದಾರರು ಘೋಷಿಸಿದಂತಹ ಐತೀರ್ಪು ಪರಿಗಣಿಸಿರುತ್ತೇನೆ. ರೈತರು ಯಾವ ದಿನಾಂಕದಂದು ನನಗೆ ಭೇಟಿಯಾಗಿದ್ದರು ಎನ್ನುವ ಕುರಿತು ನಿ.ಪಿ.11 ರಲ್ಲಿ ಮಾಹಿತಿ ಇರುವುದಿಲ್ಲ ಎನ್ನುವುದು ನಿಜ. ನಿ.ಪಿ.11 ನ್ನು ಯಾವ ದಿನಾಂಕದಂದು ತಯಾರಿಸಲಾಗಿದೆ ಎನ್ನುವ ಕುರಿತು ನಮೂದು ಇಲ್ಲ ಎನ್ನುವುದು ನಿಜ. ಅರ್ಜಿದಾರರು ನೀಡಿದಂತಹ ಮಾಹಿತಿ ಆಧಾರದ ಮೇಲೆ ಗಿಡಗಳ ವಯಸ್ಸನ್ನು ನಮೂದಿಸಿರುತ್ತೇನೆ.

18) ತೆಂಗಿನ ಗಿಡಗಳು 19 ವರ್ಷ ಬಾಳುತ್ತವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅರ್ಜಿದಾರರ ಮಾತು ಕೇಳಿ ನಿ.ಪಿ.11 ರಂತೆ ದಾಖಲೆ ತಯಾರಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**<u>ಪಾಟೀ ಸವಾಲು: MGP., ವಕೀಲರಿಂದ ಎದುರುದಾರರ No.2 ಪರವಾಗಿ:</u>**

18) ನಾನು ನಿ.ಪಿ.11 ಅಂದಾಜು ಪತ್ರಿಕೆಯನ್ನು ಅರ್ಜಿದಾರರ ಮಾಹಿತಿ ಮೇರೆಗೆ ಬರೆದಿರುತ್ತೇನೆ. ಯಾವುದೇ ಸರಕಾರದ ಅಥವಾ ತೋಟಗಾರಿಕೆ ಇಲಾಖೆಯ ಮಾರ್ಗಸೂಚಿ ಮೇರೆಗೆ ತಯಾರಿಸಿರುವುದಿಲ್ಲ.

19) ನಾನು ನ್ಯಾಯಾಲಯದಿಂದ ಸಾಕ್ಷಿ ಹೇಳಲು ಸಮನ್ಸ ಬಂದ ನಂತರವೇ ಅರ್ಜಿದಾರರ ಜಮೀನಿಗೆ ಹೋಗಿರುತ್ತೇನೆ ಎಂದರೆ ಸರಿ. ಅರ್ಜಿದಾರರ ದ್ರಾಕ್ಷಿ ಗಿಡಗಳು ವಿಸ್ತರಿಸಿದ ಜಮೀನು ಯಾವ ವರ್ಷದಲ್ಲಿ ಸ್ವಾಧೀನಗೊಂಡಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ ಹಾಗೂ ಆ ಕುರಿತಂತೆ ನಿ.ಪಿ.11 ಅಂದಾಜು ಪತ್ರಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ.

ಮುಂದುವರೆದು 2ನೇ ಎದುರುದಾರರ ಪರ ವಕೀಲರು 1 ಮತ್ತು 3ನೇ ಎದುರುದಾರರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ